# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
# ನ್ಯಾಯಾಲಯದಲ್ಲಿ, ನ.ರಾ.ಪುರ.

ಸಿಸಿ ನಂ **39/2025**

ಪಿ ಡಬ್ಲ್ಯು ಃ**-05**

ಸಾಕ್ಷಿದಾರರ ಹೆಸರು ಃ ದರ್ಶನ್
ತಂದೆಯ ಹೆಸರು ಃ ಅರವಿಂದ
ವಯಸ್ಸು ಃ 25 ವರ್ಷ
ಉದ್ಯೋಗ ಃ ಡ್ರೈವರ್
ವಾಸಸ್ಥಳ ಃ ಹೌಸಿಂಗ್ ಬೋರ್ಡ ಕಾಲೋನಿ ಎನ್.ಆರ್.ಪುರ

ದಿನಾಂಕಃ **07-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ನಂದನ್ ಇವರ ಪರಿಚಯ ವಿರುತ್ತದೆ. ದಿನಾಂಕಃ 01.06.2025 ರಂದು ದಾವಣ ಗ್ರಾಮದ ಮಂಜು ವಾಸದ ಮನೆಯ ಮುಂಭಾಗದ ರಸ್ತೆಯಲ್ಲಿ ಅಶೋಕ್ ಲೇಲೈಂಡ್ ವಾಹನದಲ್ಲಿ ದನ-ಕರುಗಳನ್ನು ತುಂಬಿಕೊಂಡು ಹೋಗುತ್ತಿದ್ದು, ಸದರಿ ವಿಚಾರ ಸಂಬಂಧ ಪೋಲಿಸರು ನೋಟಿಸು ಕೊಟ್ಟು ಬರುವಂತೆ ನಮಗೆ ಹೇಳಿದ್ದು ನಾವು ಸದರಿ ಸ್ಥಳಕ್ಕೆ ಪೋಲಿಸರ ಜೊತೆ ಸಂಜೆ 04.00 ಗಂಟೆಗೆ ಹೊರಟು ಸದರಿ ಸ್ಥಳದಲ್ಲಿ ಹೋಗಿ ನೋಡಲಾಗಿ ಒಂದು ವಾಹನದಲ್ಲಿ ದನಗಳನ್ನು ತುಂಬಿಕೊಂಡು ಹೋಗುತ್ತಿದ್ದ ಜಾಗಾ ಇದೆ ಎಂದು ತೋರಿಸಿದ ಮೇರೆಗೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಭಾವಚಿತ್ರವನ್ನು ತೆಗೆದಿರುತ್ತಾರೆ.

2. ಸಾಕ್ಷಿ ಸದರಿ ಕೃತ್ಯ ಸ್ಥಳದ ಮಹಜರ್ ಅನ್ನು ನೋಡಿ ಗುರುತಿಸಿದ್ದು ನಿಪಿ -8 ಎಂದು ಸಾಕ್ಷಿಯ ಸಹಿ ಯನ್ನು ನಿಪಿ -8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ -8 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -9 ಎಂದು ಗುರುತಿಸಲಾಯಿತು

ಪಾಟೀ ಸವಾಲು ಆರೋಪಿ **1** ಮತ್ತು **2** ರ ಪರ **Sri. H.A.S** ವಕೀಲರಿಂದ

1. ನಾನು ಸುಮಾರು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷಿಯನ್ನು ನುಡಿದಿರುತ್ತೇನೆ. ನಾನು ನಾನಾಗಿಯೇ ಪೋಲಿಸ್ ಪ್ರಕರಣಗಳಲ್ಲಿ ಸಾಕ್ಷಿ ಹೇಳು ಹೋಗಿರುತ್ತೇನೆ. ಆ ದಿನ ನಾನು ಮತ್ತು ನನ್ನ ಸ್ನೇಹಿತ ನಮ್ಮ ವೈಯಕ್ತಿಕ ಕೆಲಸದ ನಿಮಿತ್ತ ಪೋಲಿಸ್ ಠಾಣೆಗೆ ಮದ್ಯಾಹ್ನ 3.00 ಗಂಟೆಗೆ ಹೋಗಿರುತ್ತೇವೆ. ಪೋಲಿಸರು ನನಗೆ ಮತ್ತು ನನ್ನ ಸ್ನೇಹಿತನಿಗೆ ಆ ದಿನ ಮದ್ಯಾಹ್ನ 3.30 ಕ್ಕೆ ನೋಟಿಸನ್ನು ಕೊಟ್ಟಿರುತ್ತಾರೆ. ನಾನು ಸದರಿ ನೋಟಿಸನ್ನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ದಾವಣ ಊರನ್ನು ನೋಡಿರುತ್ತೇನೆ ಮತ್ತು ಹೋಗಿರುತ್ತೇನೆ. ಎನ್ ಆರ್ ಪುರದಿಂದ ದಾವಣಕ್ಕೆ ಹೋಗಲು ಒಂದು ಗಂಟೆ ಸಮಯ ಬೇಕಾಗುತ್ತದೆ. ದಾವಣದಲ್ಲಿ ಮಂಜು ಇವರ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಪೋಲಿಸರು ಸಂಜೆ 04.00 ಗಂಟೆಗೆ ದಾವಣದ ಮಂಜು ಅವರ ಮನೆಯ ಹತ್ತಿರ ಹಾಜರಿರತಕ್ಕದ್ದು ಎಂದು ನೋಟಿಸು ಕೊಟ್ಟಿರುವುದಿಲ್ಲ. ಸದರಿ ಮಂಜು ಇವರ ಮನೆ ಎಂಬುದರ ಬಗ್ಗೆ ಅಲ್ಲಿದ್ದ ಅಕ್ಕಪಕ್ಕದವರಾದ ಮಂಜು ಇವರು ತಿಳಿಸಿರುತ್ತಾರೆ. ಮಹಜರ್

ಮಾಡುವ ಕಾಲಕ್ಕೆ ಪೋಲಿಸರು ಅಶೋಕ ಎನ್ನುವವರನ್ನು ವಿಚಾರಣೆ ಮಾಡಿರುತ್ತಾರೆ. ಸದರಿ ಮಹಜರಿಗೆ ಅಶೋಕ ಎನ್ನುವವರು ಸಹಿ ಮಾಡಿರುವುದಿಲ್ಲ. ನಾವು ಆ ದಿನ ಪೋಲಿಸ್ ಜೀಪ್ ನಲ್ಲಿ ದಾವಣ ಗ್ರಾಮಕ್ಕೆ 4.00 ಗಂಟೆಗೆ ಹೋಗಿರುತ್ತೇವೆ. ನಿಪಿ-9 ರಲ್ಲಿ ಜಾನುವಾರುಗಳನ್ನು ಹತ್ತಿಸಿದ್ದಾಗಲಿ ಅಥವಾ ಆ ಬಗ್ಗೆ ಕುರುಹುಗಳಾಗಲಿ ಕಂಡು ಬರುವುದಿಲ್ಲ ಎಂದರೆ ಸರಿ. ಪೋಲಿಸರು ನಮ್ಮ ಸಮಕ್ಷಮ ಸದರಿ ಸ್ಥಳದ ಅಕ್ಕ-ಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದಲ್ಲಿ ವೈಯಕ್ತಿಕ ಮಾಹಿತಿ  ಇಲ್ಲದೇ ಇದ್ದರು ನಾನು ಪೋಲಿಸ್ ಠಾಣಾ ಪ್ರಕರಣಗಳಲ್ಲಿ ಸಾಕ್ಷಿ ಹೇಳುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಅನ್ನು ಮಾಡಿರುವುದಿಲ್ಲ ಮತ್ತು ಭಾವಚಿತ್ರ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು **3** ನೇ ಆರೋಪಿ ಪರ ವಕೀಲರು ಆರೋಪಿ **1** ಮತ್ತು **2** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ